ಮುಂದುವರೆಯಿತು. ತಮ್ಮವನ ಬಳಿ ಲೈಸೆನ್ಸ್ ಇಲ್ಲ ಎನ್ನುವ ಸತ್ಯ ಇನ್ಸ್ಪೆಕ್ಟರಿಗೆ ಅರಿವಾಯಿತು. ಆ ಹುಡುಗಿಗೂ ಗೊತ್ತಾಯಿತು, ಇನ್ನೂ ದನಿ ಎತ್ತರಿಸಿ ಮಾತಾಡಲು ತೊಡಗಿದಳು. ಆಮೇಲೆ ಅವರಿಬ್ಬರೂ ಸೇರಿ ಅವಳನ್ನು ಸಮಾಧಾನ ಮಾಡಿ ಗಾಡಿ ಬಿಟ್ಟು 'ಲೈಸನ್ಸ್ ಇಟಗಂಡು ಓಡಾಡಬಕು' ಅಂತ ಹೇಳಿ ಕಳಿಸಿ, ಸಮಾಧಾನದ ನಿಟ್ಟುಸಿರು ಬಿಟ್ಟರು.

ವ್ಯವಸ್ಥೆ ಎನ್ನುವುದು ಬಹಳ ಸೀಮಿತ ರೂಪದಲ್ಲಿ ಇಲ್ಲಿ ಏದುಸಿರು ಬಿಡುತ್ತಾ ಸಾಗುತ್ತದೆ. ಸಾಂವಿಧಾನಿಕ ಹಕ್ಕುಗಳ ಪರಿಚಯ ಇದೆ ಅಂತೆಲ್ಲಾ ಏನಿಲ್ಲ. ಏನನ್ನೂ ಸುಮ್ಮನೆ ಒಪ್ಪಿಕೊಳ್ಳುವ ಜಾಯಮಾನವೇ ಇಲ್ಲಿ ಕಾಣದು. ಇಡೀ ಊರು ಒಂದು ಮುಕ್ತ ಕೋಟೆಯ ಹಾಗಿರುವುದರಿಂದ ಎಷ್ಟು ಹೊತ್ತಿನಲ್ಲಿ ಓಡಾಡಲೂ ಜನ ಹೆದರುವುದೇ ಇಲ್ಲ. ಹುಡುಗರಂತೆಯೇ ಹುಡುಗಿಯರೂ 'ಹೊತ್ತು ಮುಣುಗಿದ ಮ್ಯಾಲೂ' ಒಬ್ಬೊಬ್ಬರೇ ಓಡಾಡುತ್ತಲೇ ಇರುತ್ತಾರೆ.

ಹಾ ಅಂದ ಹಾಗೆ, ಈ ಊರಿನಲ್ಲಿ ಬಹಳಷ್ಟು ಮೇಷ್ಟ್ರುಗಳೂ ಇದ್ದಾರೆ. ಆದ ಕಾರಣಕ್ಕೇ 'ಟೂಶನ್ನು' ಭಾರೀ ಭರಾಟೆಯಲ್ಲಿ ನಡೆಯುತ್ತದೆ.

'ಹೂಂ ಎನವಾ ಓದದು ಬರಿಯದು ಎನರೆ ನಡಸೀಯ ಇಲ್ಲಾ ನಿಮಪ್ಪ ಗಂಡು ನೋಡಬಕ?'

'ಇಲ್ರೀ ಮಾಮ. ಓದತಿನಿ'

'ಏನ್ ಓದತೀ?'

'ಕ್ಯಾನ್ಸರ್ ಮ್ಯಾಲೆ ರೀಸರ್ಚ್ ಮಾಡನ ಅಂತ ಅದೀನಿ'

'ಅದ್ಯಾತ್ರುದು? ಎಲ್ಲಿಗ್ ಹೋಬಕು ಅದನ್ನ ಓದಕೆ'

'ಬೆಂಗ್ಳೂರು, ಮೈಸೂರು, ಅತ್ವಾ ಬ್ಯಾರೆ ಕಡೆ ಹೋಬಕ್ರಿ. ಅದೇ ಭಾಳ ನಮೂನಿ ಕ್ಯಾನ್ಸರ್ ಅದಾವಲ್ಲ ಅದರ ಮ್ಯಾಲೆ ರೀಸರ್ಚ್ ಮಾಡಬಕು ಅಂತ ವಿಚಾರ್ ಐತಿ' ಕಿಸಕ್ಕನೆ ನಕ್ಕು 'ಹೂ ಹೂ ಮಾಡ ಮಾಡು, ಪಾಡಾಕ್ಕತಿ. ಎಲ್ರೂ ಡಾಕ್ಟ್ರಾಬಕು ಅಂದ್ರೆ ಹ್ಯಂಗ? ಯಾರರೆ ನರ್ಸೂ ಆಬಕು, ಮತ್ಯಾರರೆ ಕಂಪೋಂಡ್ರೂ ಆಬಕು, ಮತ್ತ ಪೇಷಂಟೂ ಆಗಬಕಲ್ಲ?' ಅಂತ ವ್ಯಂಗ್ಯವಾಗಿ ಮಾತಾಡಿದ ವ್ಯಕ್ತಿಗೆ ಇಡೀ ಜೀವನ ಮೆಡಿಕಲ್ ಸೀಟಿನಲ್ಲೇ ನಿಂತು ಹೋಗಿತ್ತು. ಅವಡುಗಚ್ಚಿ ಕೆಲಸ ಮಾಡಿ ಮಗಳು, ಮಗ ಮತ್ತೀಗ ಮೊಮ್ಮಕ್ಕಳು ಎಲ್ಲರನ್ನೂ ಮೆಡಿಕಲ್ ಓದಿಸಿದ ಅಥವಾ ಮೆಡಿಕಲ್ ಹಾದಿಗೆ ಹಚ್ಚಿದ ಆತ್ಮವಿಶ್ವಾಸ ಅವರಲ್ಲಿ ಇತ್ತು. ಅದನ್ನ ಏಕೈಕ ಗುರಿಯೆಂಬಂತೆ ಸಾಧಿಸಿದ್ದರು. ಇದು ಟಿಪಿಕಲ್ ವ್ಯಕ್ತಿತ್ವ ಅಂದರೆ ತಪ್ಪಾಗಲಾರದು.

'ಅಂಕಲ್, ಸಿದ್ದಪ್ಪ ಇದನ?'

'ಲೇ ಸಿದ್ದಾಆಆಆಆಆ" ಎಂದು ಹತ್ತಾರು ಬಾರಿ ಕರೆದರೂ ಉತ್ತರ ಬರಲಿಲ್ಲ.

'ಇಲ್ಲವ ಎಲ್ಲೋ ಹೊಗಿರಬಕು, ಅದೇ ಶೆಗಣಿ ತಿನ್ನಕೆ'

'ಬಂದ್ರೆ ಬಂದಿದ್ದೆ ಅಂತ ಹೇಳ್ರಿ ಅಂಕಲ್'

'ಸಿಕ್ರ ಹೇಳ್ತನಿ. ಸಿಗಬಕಲ್ಲ ನಾಯಿಯಂತನು'

'ಆತು ಅಂಕಲ್'

'ಈ ಯತ್ಲಗ ಹ್ವಂಟಿ?'

'ನಾನು ಬೆಣ್ಣೆ ದ್ವಾಸಿ ಹೋಟ್ಲು ಹತ್ರ ಹೋಗಿ ನೋಡ್ತನಿ, ಅಲ್ಲೇನಾರ ಅದಾನ ಅಂತ'

'ಅದೇ ಬೇಷಿ ಇದ್ದಾನು ಅಲ್ಲೇ ನಿಮ್ದೆಲ್ಲ ಇಷ್ಟೇ ಲೈಕ್ಕ. ಮಾಡಕ್ ಕೆಲಸಿಲ್ಲ, ಕುಂದ್ರಾಕ ಪುರುಸೊತ್ತಿಲ್ಲ ಅಂತರಲ್ಲ ಹಂಗಾತು ಹೋಗತ್ಲಗೆ.' ಎಂದು ಸರಸರ ನಡೆದೇ ಹೋಗುತ್ತಾರೆ.

ಎಲ್ಲಾ ಊರುಗಳಲ್ಲೂ ಇರುವಂತೆ ಎಳೆಯ ವಯಸ್ಸಿನವರಿಗೆ ದೊಡ್ಡವರ ಬಗ್ಗೆ ಒಂದು ಬಗೆಯ ನಿರ್ಲಕ್ಷ್ಯ, ದೊಡ್ಡವರಿಗೆ ಚಿಕ್ಕವರ ಬಗ್ಗೆ ಒಂದು ಬಗೆಯ ತಾತ್ಸಾರಕ್ಕೇನೂ ಕಡಿಮೆ ಇಲ್ಲ. ಆದರೆ ಎಲ್ಲರೂ ಸೇರಿ ಸರ್ವಾನುಮತ ನೀಡುವುದು ಇಲ್ಲಿನ ತಿಂಡಿಗಳಿಗೆ ಮಾತ್ರ.

ಬೆಂಗಳೂರು ಮೈಸೂರುಗಳಲ್ಲಿ ನಾಜೂಕಾಗಿ ನಿಲ್ಲುವ 'ದೋಸೆ' ಇಲ್ಲಿಗೆ ಬಂದರೆ ಕಟ್ಟಿಗೆ ಒಲೆಯ ಮೇಲೆ ಚಾಚಿಕೊಂಡ ಹಂಚಿನ ಮೇಲೆ ರಪ್ ಎಂದು ಬಿದ್ದು ಬೆಣ್ಣೆಯಲ್ಲಿ ಬೆಂದು ವಿಶೇಷ ರುಚಿ ಹೊಂದುತ್ತದೆ. ಎಷ್ಟರ ಮಟ್ಟಿಗೆ ಎಂದರೆ 'ದಾವಣಗೆರೆ ಬೆಣ್ಣೆ ದೋಸೆ' ಎಂದು ಖ್ಯಾತಿ ಪಡೆಯುವಷ್ಟು ವಿಭಿನ್ನ.

ನರ್ಗಿಸ್ ಮಂಡಕ್ಕಿ, ಗುಳ್ಳಡಿಕಿ ಉಂಡಿ, ಮಸಾಲಿ ಮಂಡಕ್ಕಿ, ಹ್ವಟ್ಟೆ ನಂಜಣ್ಣನ ಅಂಗಡಿ ಕಾರ, ಆಂಬೋಡೆ, ಮಿರ್ಚಿ/ಮೆಣ್ಸಿನ್ಕಾಯಿ, ಸ್ವಾವಣಿಗೆ ಹುಗ್ಗಿ ಇತ್ಯಾದಿ ಇತ್ಯಾದಿಗಳಿಗೆ ಇನ್ನೂ ರುಚಿಯ ಮಾರ್ಕೆಟ್ ಹೆಚ್ಚುತ್ತಲೇ ಇದೆ ಎನ್ನುವುದೇ


ಕುಂದವಾಡ ಕೆರೆ
ಚಿತ್ರ: ಡಾ. ಶಿಶುಪಾಲ

ಅಸ್ಮಿತೆಗೆ ಸಂಬಂಧಿಸಿದ ದೊಡ್ಡ ಸಮಾಧಾನ. ಊರು ಏನೇ ಆಗಿರಲಿ, ಇಂದಿಗೂ ಹೊಸಬರು ಯಾರೇ ಆ ದಾವಣಗೆರೆಗೆ ಹೋದರೂ 'ಬರ್ರಿ ಬರ್ರಿ ಈಗ್ ಬಂದ್ಯಾ? ಕೈ ಕಾಲು ತೊಕ್ಕಳ್ರಿ ಬರ್ರಿ ಊಟ ಮಾಡನ' ಎಂದು ಕರೆಯುವ ಆಪ್ತತೆ ಇಲ್ಲದಿಲ್ಲ. ಈಗಲೂ ಹೋಗುವಾಗ ಅಪರಿಚಿತರಾಗಿ ಹೋದವರು ಅಲ್ಲಿಂದ ಹೊರಡುವಾಗ ನೂರಾರು ಆಪ್ತ ನೆನಪುಗಳ ಹಾಗೂ ಸಂಬಂಧಗಳ ಗಂಟು ಕಟ್ಟಿಕೊಂಡು ಬರುವುದು ನಿಶ್ಚಿತ.

ಎಲ್ಲಾ ಸಮುದಾಯಗಳೂ ದಾವಣಗೆರೆಯವರೇ ಆಗಿಬಿಡುವ ಪರಿ ಅನನ್ಯ. ಯಾವ ಜಾತಿ, ಯಾವ ಧರ್ಮ, ಯಾವ ಕೋಮೇ ಆಗಲಿ, ಎಲ್ಲರೂ ಕಾಲಾಂತರದಲ್ಲಿ ದಾವಣಗೆರಯ ಭಾಷೆಗೆ ಒಗ್ಗಿಕೊಂಡು ತಮ್ಮದಾಗಿಸಿಕೊಳ್ಳುತ್ತಾರೆ. ಗಲಾಟೆಗಳು ಇಲ್ಲದಿದ್ದ. ಸದಾ ಹೊಡೆದಾಟಕ್ಕೇ ಬರುವಂತೆ ಮಾತನಾಡುವ ಜನ, ಅತ್ಯಂತ ವಿಶ್ವಾಸ ತೋರುವ ಜನರೂ ಹೌದಾಗುವುದು ಒಂದು ವಿಸ್ಮಯ.

'ನೀವೇನ್ ಬಿಡಪ ದಿಮ್ಮಗ ದುಡುದು ಅಂಡರ್ವರ್ಲ್ಡ್ ಡಾನ್ ಆಗೀರಿ. ಮನಿ ಮ್ಯಾಲ್ ಮನಿ ಕಟ್ಲೀರಿ, ಅತ್ತಗೊಂದು ಮಳಿಗಿನೂ ಇಡಿಸಿದ್ರೆ ಆಗ್ತಿತ್ತು ದುಡಿಮಿ ಆರಾಮ್ ನಡೀತಿತ್ತು' ಎನ್ನುತ್ತಾ ದುಡ್ಡೇ ದೊಡ್ಡಪ್ಪ ಎನ್ನುವ ಊರಿಗೆ ವಿದ್ಯೆ ಮಾತ್ರ ದುಡ್ಡು ಇದ್ದವರ ಪ್ರಿವಿಲೆಜ್ ಎನ್ನುವುದೂ ತಿಳಿದಿದೆ. ಹಾಗಾಗಿಯೇ ಇನ್ನೂ ವಿದ್ಯೆ 'ಅವರಪ್ಪ' ಆಗಿಲ್ಲ. ಅದಿನ್ನೂ ದೊಡ್ಡಪ್ಪನ ಕಿರಿಯ ತಮ್ಮನಾಗೇ ಉಳಿದಿದೆ.

ಒಮ್ಮೊಮ್ಮೆ ಸೋಜಿಗವಾಗುತ್ತದೆ. ಇಲ್ಲಿ ಯಾವ ಇತಿಹಾಸವೂ ಮೈದಳೆಯಲಿಲ್ಲವಲ್ಲ ಎಂದುಕೊಂಡಾಗ 'ಕಮ್ಯುನಿಸ್ಟ್' ಪಕ್ಷ ಮಾಡಿದ ಹೋರಾಟಗಳು, ಅಲ್ಲಲ್ಲಿ ನಡೆದ ಪ್ರತಿರೋಧಗಳು, ಮತ್ತಷ್ಟು 'ಧರ್ಮ'ದ ಮಾತುಗಳೂ ನೆನಪಾಗಿ ಚಿತ್ರಗಳಂತೆ ಕಾಣಿಸಿಕೊಳ್ಳುತ್ತವೆ.

'ನಾವು ಲಿಂಗ್ ಪೂಜೆ ಮಾಡ್ಲಿಲ್ದಂಗ ಒಂದ್ ಹನಿ ನೀರೂ ಬಾಯಗ್ ಹಾಕ್ಯನಲ್ಲಪ' ಎನ್ನುವ ಮಾತಂತೂ ತೀರಾ ಕಾಮನ್.

ಕನ್ನಡದ ಬಗ್ಗೆ ಅತ್ಯಂತ ಸುಂದರ ನುಡಿಗಳೆಂದು ಕನ್ನಡವು ಕನ್ನಡದ ಕನ್ನಡಿಸುವಂತಿರಬೇಕು ಎನ್ನುವ ಸಾಲಿಗೆ ಸಾದ್ಯಂತವಾಗಿ ಕವಿ ಮಹಲಿಂಗರಂಗರು ಶತಮಾನಗಳ ಹಿಂದೆ ಇದೇ ನೆಲದ ಮೇಲೆ ನಿಂತು ಹೇಳಿದ್ದರು.

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಾಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡೊಡೆ ಸಾಲದೇ ಸಂಸ್ಕೃತದೊಳಿನ್ನಿನ್ನೇನು?

ಕಾಲವನ್ನು ತನ್ನೊಳಗೆ ಹುದುಗಿಸಿಕೊಂಡು ಮುಂದೆ ಸಾಗುತ್ತಾ ಹೋಗಿರುವ ಈ ಊರಿನ ಹೆಗ್ಗಳಿಕೆಗೆ ಈ ಸಾಲುಗಳ ಹೊಳಪು ಮತ್ತಷ್ಟು ಆಳಕ್ಕೆ ಇಳಿಯುತ್ತದೆ. ಇಂಗ್ಲಿಷಿನಲ್ಲಿ ಮತ್ಯಾವುದೋ ದಟ್ಟ ಬೇರಿನ ಭಾಷೆಯಿಂದ ಬಂದಿರುವ 'ಹಿರಏತ್' ಎನ್ನುವ ಪದವೊಂದಿದೆ. ಅದರ ಅರ್ಥ ಹೇಳುವುದು ಭಾಷೆಯನ್ನು ಮೀರಿದ ಭಾವ. ತಾನು ಬಿಟ್ಟು ಬಂದ ಊರು, ಕಾಲದಲ್ಲಿ ಕಳೆದುಹೋಗಿ ಈಗ ಇಲ್ಲದ ಊರಿಗೆ ಹಿಂದಿರುಗುವ ಸೆಳೆತ. 'ಹೋಗಬಕು ಅಂತನಿ, ಆದ್ರ ಹೋಗಕ ಆಗಂಗಿಲ್ಲ. ಯಾಕಂದ್ರ ಬಿಟ್ ಬಂದ ಊರು ಅಲ್ಲಿ ಈಗ ಇಲ್ಲೇ ಇಲ್ಲ' ಎನ್ನುವ ಭಾವುಕತೆಯ ತೆಳು ಪದರ ಮಾತ್ರ ಇದೆ.

ದಾವಣಗೆರೆ ಎನ್ನುವ ಧಾಡಸಿ ಊರು ತಬ್ಬಿ ಅಪ್ಪಿಕೊಳ್ಳುವುದಿಲ್ಲ, ಆದರೆ ತಬ್ಬಲಿಯಾಗಿಸುವುದೂ ಇಲ್ಲ. ಮತ್ತಷ್ಟು ಪ್ರಿಯವಾಗುತ್ತಲೇ ಊರನ್ನು ಮೀರಬೇಕು ಎನ್ನುವ ತುಡಿತವನ್ನೂ ಹೆಚ್ಚಿಸುತ್ತದೆ. ■